ಶುದ್ಧವಾಗಿದ್ದು ಇಲ್ಲಷ್ಟೇ ಕೊಳಕಿದೆ ಎಂಬಂತೆ ನಾನು ಪ್ರಕ್ಷುಬ್ಧನಾಗುತ್ತಿದ್ದೆ. ಸಾಮಾನ್ಯವಾಗಿ ದುಡಿವವರ ಪರವಾಗಿ ಚಿಂತಿಸುವ ನಾನು, ಅವರ ಮೈಗಳ್ಳತನ ಬೇಜವಾಬ್ದಾರಿ ಕಂಡು ಸಿಡುಕತೊಡಗಿದೆ. ಲಾರಿಯವನು ಹಿಟ್ಟುಗಲ್ಲನ್ನು ಸುರಿದುಹೋದಾಗ, ಉಸುಕಿನವರು ಮಣ್ಣನ್ನು ಬೆರೆಸಿ ತಂದಾಗ, ಬಣ್ಣದವನು ಅರ್ಧಕ್ಕೆ ಕೆಲಸ ನಿಲ್ಲಿಸಿ ಇನ್ನೊಂದು ಮನೆಯ ಕಾಂಟ್ರಾಕ್ಟು ಹಿಡಿದಾಗ, ಜನರ ಮೇಲಿದ್ದ ನಂಬಿಕೆಯೇ ಹಾರಿಹೋಗುತ್ತಿತ್ತು. 'ನೀನಲ್ಲವೇ ಆರಾಮಾಗಿದ್ದವನಿಗೆ ಚೂಲು ಹುಟ್ಟಿಸಿದವಳು. ನನಗೆ ಮನೆಯೇ ಬೇಡಾಗಿತ್ತು. ಯಾರಿಗೆ ಬೇಕು ಈ ತಲೆನೋವು?' ಎಂದು ಬಡಪಾಯಿ ಸತಿಯ ಮೇಲೆ ಹರಿಹಾಯುತ್ತಿದ್ದೆ. 'ಮನೆಯಲ್ಲಿ ನಾನೊಬ್ಬಳೇ ಇರುತ್ತೇನೆಯೇ? ಮೀನುಫ್ರೈ ಮಾಡಿದ್ದಕ್ಕೆ ಮನೆ ಬಿಡಿಸಿದ್ದನ್ನು ನೆನಪಿಸಿಕೊ. ಎಷ್ಟು ದಿನಾಂತ ಬಾಡಿಗೆ ಮನೆಗಳ ವಾಸ? ನಮ್ಮ ಹೊಟ್ಟೆಯಲ್ಲೂ ಮಕ್ಕಳಿದ್ದಾರೆ. ಅವು ಮುಂದೆ...' ಎಂದು ವಾಕ್ಯ ಮುಗಿಸಲಾಗದೆ ಆಕೆ ಗದ್ಗದಗೊಳ್ಳುತ್ತಿದ್ದಳು. ನಮ್ಮ ಕಿತ್ತಾಟಕ್ಕೆ ಮಕ್ಕಳು ಮುಖ ಸಪ್ಪಗಾಗಿಸಿಕೊಂಡು ದಿಕ್ಕೆಟ್ಟ ಕಂಗಳಿಂದ ನೋಡುತ್ತಿದ್ದವು. ಮರುಕ್ಷಣವೇ ರಾಶಿಬಿದ್ದ ಹಸಿಮರಳನ್ನು ಪಾದದ ಮೇಲೆ ಸುರುವಿಕೊಂಡು ತಟ್ಟಿ ಮನೆಕಟ್ಟುವ ಆಟವಾಡುತ್ತಿದ್ದವು. ಇವೆಲ್ಲವೂ ನನ್ನ ಅಸಹನೆ ದೌರ್ಬಲ್ಯಗಳನ್ನೆ ಎತ್ತಿ ತೋರಿಸಿದಂತಾಗಿ ಮತ್ತಷ್ಟು ವ್ಯಗ್ರನಾಗುತ್ತಿದ್ದೆ. ಪ್ರತಿ ಜಗಳದ ಕೊನೆಗೆ ಶೋಚನೀಯವಾಗಿ ಸೋತು ಹತಾಶೆಯಿಂದ ಕುಗ್ಗಿಹೋಗುತ್ತಿದ್ದೆ. ಈ ರಗಳೆಗಳಿಂದ ತಪ್ಪಿಸಿಕೊಳ್ಳಲು ಭಾಷಣದ ನೆಪದಲ್ಲಿ ಊರುಬಿಟ್ಟು ಹೋಗಲಾರಂಭಿಸಿದೆ. ಬಾನು ಮಾತ್ರ ಸೈಟಿನ ಮೇಲೆ ತನ್ನನ್ನು ಬುನಾದಿಯ ಬಂಡೆಯಂತೆ ಸ್ಥಾಪಿಸಿಕೊಂಡಳು. ಮನೆ ಅವಳ ಪಾಲಿಗೆ ಬಾಳಿನಲ್ಲಿ ಗೆಲ್ಲಲೇಬೇಕಾದ ಯುದ್ಧವಾಗಿತ್ತು. ಅವಳಿಗೆ ಗತಿಸಿದ ನನ್ನಮ್ಮನ ಭೂತ ಹಿಡಿದಿರುವುದು ಖಚಿತವಾಯಿತು.

ನಮ್ಮಿಬ್ಬರ ಜಗಳ, ಕೂಗಾಟ, ಕಷ್ಟ, ಸಹನೆಗಳ ನಡುವೆ ಬಹುಕಾಲ ಸುಪ್ತ ಸ್ವಪ್ನವೊಂದು ನೋಡೆನೋಡೆ ಮೈದಳೆಯುತ್ತಿತ್ತು. ನಿರ್ಜೀವ ಗೆರೆಗಳ ನಕ್ಷೆಯಲ್ಲಿದ್ದ ಅಸ್ಥಿಪಂಜರಕ್ಕೆ ವಾಸ್ತುಶಿಲ್ಪಿಯೆಂಬ ಮಾಟಗಾರನು ನಾಗಬೆತ್ತ ಮುಟ್ಟಿಸಿ ಜೀವಬರಿಸುತ್ತಿರುವಂತೆ ಭಾಸವಾಗುತಿತ್ತು. ಆಗಸದಿಂದ ಬಿದ್ದನೀರು, ಭೂಮಿಯೊಳಗಿನ ಮಣ್ಣು, ಬೆಟ್ಟಗುಡ್ಡದ ಕಲ್ಲು, ಹೊಳೆಯ ಉಸುಕು, ಕಾಡಿನ ದಿಮ್ಮಿ, ಕಾರ್ಖಾನೆಯ ಕಬ್ಬಿಣ, ಸಿಮೆಂಟು, ವಾಸ್ತುಶಿಲ್ಪಿಯ ಕಲ್ಪನೆ, ಕಾರ್ಮಿಕರ ದುಡಿಮೆ, ನಮ್ಮ ಕನಸು ಎಲ್ಲವೂ ಸಮರಸಗೊಂಡು ಆಕೃತಿ ಪಡೆಯುವುದೇ ಒಂದು ಅದ್ಭುತ. ಇದು ಕಲ್ಪನೆ ಭಾವನೆ ಅನುಭವಗಳು ಮುಪ್ಪುರಿಗೊಂಡು ಸಾಹಿತ್ಯಕೃತಿಯೊಂದು ಸೃಷ್ಟಿಯಾದಂತೆ, ಮಡದಿಯ ಬಸಿರಲ್ಲಿ ಮಗು ನವಮಾಸ ಕಾದು ತಕ್ಕರೂಹು ಪಡೆಯುವಂತೆ, ಸೃಜನಶೀಲ ಸಂಭವವಾಗಿತ್ತು. ಬಾಡಿಗೆಮನೆಯ ಶಾಪದಿಂದ ಪಾರುಮಾಡಬಲ್ಲ, 'ಮನೆ ಖಾಲಿ ಮಾಡ್ರಿ' ಎಂದು ಯಾರೂ ಎಬ್ಬಿಸಲಾರದ ಸ್ವಂತ ಸದನವನ್ನು ದೀಪಹಚ್ಚಿ, ಹಾಲುಕ್ಕಿಸಿ ಪ್ರವೇಶಿಸಲು ಬಾನು ಉತ್ಸಾಹದಿಂದ ತಯಾರಿ ನಡೆಸಿದಳು. ಈ ನಡುವೆ ಘಟಿಸಿದ ಮೂರು ಘಟನೆಗಳು ನಮ್ಮನ್ನು ವಿಚಲಿತಗೊಳಿಸಿದವು.

ಒಂದು: ವಾಚ್‌ಮನ್ ಶೆಡ್ಡಿನಲ್ಲಿ ನಡೆದಿದ್ದು. ಒಂದು ಸಂಜೆ, ಗಂಡು ಗುಬ್ಬಿಯೊಂದು ಬಂದು, ಶೆಡ್ಡಿನ ಜಂತಿಗೆ ಹಾಕಿದ್ದ ಬೊಂಬಿನ ಟೊಳ್ಳಿನೊಳಗೆ ಹೊಕ್ಕು–ಹೊರಡು ಮಾಡುತ್ತ ಜಾಗ ಅಜಮಾಯಿಸುತ್ತಿತ್ತು. ಮಾರನೇ ದಿನ ಹುಲ್ಲುಗರಿ, ಪುಕ್ಕ, ಪ್ಲಾಸ್ಟಿಕ್‌ದಾರ, ಅರಳೆಚೂರು ತಂದಿಡತೊಡಗಿತು. ಇದನ್ನೆಲ್ಲ ಹೆಣ್ಣು ದೂರದಲ್ಲಿದ್ದು ಕಿರುಗಣ್ಣಿನಿಂದ ಗಮನಿಸುತ್ತಿತ್ತು. ವಾರೊಪ್ಪತ್ತಿನಲ್ಲಿ ಗೂಡು ಅನಾಯಾಸ ತಯಾರಾಯಿತು. ಹೆಣ್ಣು ಮೊಟ್ಟೆಯಿಡಲು ಒಳ